

# ಬೆಟ್ಟದ ಹೂವು

## ಆರ್ಕಿಡ್‌ಗಳ ಸುಂದರ ಲೋಕದಲ್ಲಿ...

ಬೆಟ್ಟದ ಹೂವು– ನಾನು ಕಾಲೇಜಿನ ದಿನದಲ್ಲಿದ್ದಾಗ ನೋಡಿದ, ನಟ ಪುನೀತ್ ರಾಜ್‌ಕುಮಾರ್ ನಟಿಸಿದ ಒಂದು ಅದ್ಭುತ, ಸರಳ ಮತ್ತು ಸುಂದರ ಮಕ್ಕಳ ಚಿತ್ರ. ಅದೂ ಕಪ್ಪು ಬಿಳುಪು ಟಿ.ವಿಯಲ್ಲಿ!

ಬಡತನ, ದಿಕ್ಕಿಲ್ಲದ ಮತ್ತು ಅಜ್ಜಿಯ ಆಸರೆಯಲ್ಲಿ ಬೆಳೆಯುವ ಬಾಲಕನ ಬದುಕು, ಕಾಸು ಕೂಡಿಸಿಕೊಂಡು ರಾಮಾಯಣ ಪುಸ್ತಕ ತೆಗೆದುಕೊಳ್ಳುವ, ಸ್ವರ್ಲಿಂಗ್ ಮೇಡಂಗೆ ಬೆಟ್ಟದಲ್ಲಿ, ಎತ್ತರದ ಮರದಲ್ಲಿ ಬೆಳೆದಿರುವ ಬೆಟ್ಟದ ಹೂ ತಂದುಕೊಡುವ ಪುಟ್ಟ ಪುನೀತ್ ಅಭಿನಯ ಇಂದಿಗೂ ಮನಸಿನಲ್ಲಿ ಅಚ್ಚಳಿಯದಂತೆ ಉಳಿದಿದೆ.

ನಾನೀಗ ಕಥೆ ಹೇಳಹೊರಟಿರುವುದು ಅದೇ ಬೆಟ್ಟದ ಹೂವೆಂದು ಕರೆಯುವ, ಆಕರ್ಷಕ, ಮನಮೋಹಕ ಸೀತೆ ಹೂ ಅಥವಾ ಕಾಡಿನ ಆರ್ಕಿಡ್ ಹೂವಿನ ಬಗೆಗೆ. ಅಂದು ನಾನು ನೋಡಿರದ ಹೂವಿನ ಬಗ್ಗೆ ತಿಳಿಯುವ ಕುತೂಹಲ ಬಂದದ್ದು ಮಲೆನಾಡಿಗೆ ಬಂದ ನಂತರ. ಕೊಡಗಿನಲ್ಲಿ ಹೇಳಿ ಕೇಳಿ ಮಳೆ, ಗಾಳಿ ಹೆಚ್ಚು. ಆಗಾಗ್ಗೆ ಬೀಸುವ ಭಾರಿ ಗಾಳಿ ಮಳೆಗೆ ಬುಡಮೇಲಾಗುವ ರಸ್ತೆ ಬದಿಯ ಮರಗಳನ್ನು ಗಮನಿಸಿ, ಅದರಲ್ಲಿದ್ದ ಅಪ್ಪು ಸಸ್ಯಗಳ ಸಂಗ್ರಹ ಪ್ರಾರಂಭವಾಗಿ, ನಂತರ ಅವುಗಳ ಸಂರಕ್ಷಣೆಗೂ ಎಡೆಮಾಡಿಕೊಟ್ಟಿತು. ಇಂದು ಮನೆಯಲ್ಲಿ ಇಪ್ಪತ್ತಕ್ಕೂ ಹೆಚ್ಚು ಆರ್ಕಿಡ್‌ಗಳಿವೆ.

ಮರಗಳ ತೊಗಟೆಗೆ ಅಪ್ಪಿಕೊಂಡು ಬೆಳೆಯುವ ಆರ್ಕಿಡ್ ಆಕರ್ಷಕ ಸಸ್ಯ. ಇದರಲ್ಲಿನ ಒಂದೊಂದು ಪ್ರಭೇದದ್ದೂ ಒಂದೊಂದು ಬಣ್ಣ, ಚೆಲುವು, ವೈಭವ...

■ ಚಿಕ್ಕಾಯರಹಳ್ಳಿ ಡಿ. ಕೃಷ್ಣ ಚೈತನ್ಯ



ಹೂವು, ಎಲ್ಲವೂ ಅತೀ ಸುಂದರ, ಆಕರ್ಷಕ, ಕಣ್ಮನ ಸೆಳೆಯುವ ಒಂದು ಅದ್ಭುತ ವಸ್ತು. ಸುವಾಸನೆ ಇದ್ದರಂತೂ ಕಣ್ಮುಚ್ಚಿ ಅವುಗಳ ಘಮ ಸವಿಯುವುದೇ ಆನಂದ. ಅದರಲ್ಲೂ ನಮ್ಮ ಕನ್ನಡ ನಾಡಿನ ಮಲ್ಲಿಗೆ, ಸೂಜಿಮಲ್ಲಿಗೆ, ಕೇದಿಗೆ, ಸಂಪಿಗೆ, ಪಾರಿಜಾತ, ಚೆಂಡು ಹೂ, ಸೇವಂತಿಗೆ ಮುಂತಾದ ಹೂವುಗಳ ಪರಿಮಳ, ಓಹ್! ಎಂಥವರನ್ನೂ ಮರುಳು ಮಾಡಿಬಿಡುತ್ತದೆ. ಆದರೆ ಆರ್ಕಿಡ್ ಹೂವಿಗೆ ಆ ಘಮ ಇರುವುದಿಲ್ಲ. ಸೀತೆ ಹೂ ಎಂದು ಏಕೆ ಬಂದಿರಬಹುದು ಎಂದು ಯೋಚಿಸಿದಾಗ ಸಿಗುವ ಉತ್ತರ, ಬಹುಶಃ ಸೀತೆಯನ್ನು ರಾಮ ಕಾಡಿನ ಪಾಲು ಮಾಡಿದ ಎಂತಲೋ, ಅಥವಾ ರಾವಣ ಸೀತೆಯನ್ನು ಅಪಹರಿಸಿ ಅಶೋಕವನವೆಂಬ ಕಾಡಿನಲ್ಲಿ ಇಟ್ಟ ಕಾರಣಕ್ಕೋ ತಿಳಿಯದು. ಇವೂ ಕಾಡಿನಲ್ಲಿ ಬೆಳೆಯುವುದರಿಂದ ಆ ಅನ್ವರ್ಥಕ ನಾಮ ಸಿಕ್ಕಿರಬಹುದೇನೋ!

ಸೀತೆ ಹೂ ಕಾಡಿನ ಒಂದು ಅಪ್ಪು ಸಸ್ಯ. ಸಹ್ಯಾದ್ರಿ ಶ್ರೇಣಿಯ (ಪಶ್ಚಿಮ ಘಟ್ಟ) ಬಹುತೇಕ ಮರಗಳ ತೊಗಟೆಗೆ ಅಪ್ಪಿಕೊಂಡು ಬೆಳೆಯುವ ಒಂದು ಪುಟ್ಟ ಸಸ್ಯ. ಆರಂಭದಲ್ಲಿ ಸಸ್ಯ ಮೊಳೆಯುವಾಗ ಹುಟ್ಟಿಕೊಳ್ಳುವ ಬೂದು ಬಣ್ಣದ ಬೇರು, ಗಿಡ ಬೆಳೆದಂತೆ ಬೆಳೆದು ಮರದ ಕೊಂಬೆ, ರೆಂಬೆ ಮತ್ತು ಕಾಂಡದ ಮೇಲೆ ಸುತ್ತಿಕೊಳ್ಳುವಂತೆ ಬೆಳೆಯುತ್ತವೆ. ಬೇರಿನ ತುದಿ ಮಳೆಗಾಲದಲ್ಲಿ ಮಾತ್ರ ಸ್ಪಂಜಿನಂತೆ ಬೆಳೆದು ಕ್ರಮೇಣ ಬಿಸಿಲು ಹೆಚ್ಚಾಗುವ ತಿಂಗಳು ಬಂದಂತೆ ಗಟ್ಟಿಯಾಗಿಬಿಡುತ್ತವೆ. ಇನ್ನು ಹೂವುಗಳು ಮಾತ್ರ ಕಾಣಸಿಗುವುದು ಮಳೆಗಾಲದಲ್ಲಿಯೇ! ಅದೂ ಒಂದೆರಡು ವಾರ ಮಾತ್ರ.

ವ್ಯಾಂಡ, ನೆಲದಲ್ಲಿ ಬೆಳೆಯುವ ಒಂದು ಆರ್ಕಿಡ್. ಅದರ ಸೌಂದರ್ಯ ನೋಡಿಯೇ ಆನಂದಿಸಬೇಕು. ಕಡ್ಡಿಯಂತೆ ಬೆಳೆಯುವ ಕಾಂಡ, ಅದರ ಎರಡು ಬದಿಯಲ್ಲಿ ಚಪ್ಪಟೆಯಾದ ಮತ್ತು ಮಂದವಾದ, 2 ರಿಂದ 3 ಇಂಚು ಉದ್ದದ ಎಲೆಗಳು. ಸಣ್ಣ ಸಣ್ಣ ಬೇರುಗಳು ಮಣ್ಣಿನಲ್ಲಿ ಸ್ವಲ್ಪಮಟ್ಟಿಗೆ ಬೆಳೆದರೆ ಬಹಳಷ್ಟು ಅಂಚಿಕಡ್ಡಿಯಷ್ಟು ದಪ್ಪದ ಬೇರುಗಳು ಗಾಳಿಯಲ್ಲಿ ಬೆಳೆಯುತ್ತವೆ. ಮಲೆನಾಡಿನ ಮಳೆಯಲ್ಲಿ ಚೆನ್ನಾಗಿ ಬೆಳೆಯುವ ಈ ಗಿಡಕ್ಕೆ 'ಸ್ಟಾರ್ ಫೈರ್ ಆರ್ಕಿಡ್' ಎನ್ನುವರು. ಸಾಮಾನ್ಯವಾಗಿ ಕ್ರೂಸಿಫಿಕ್ಸ್ ಅಥವಾ ಬಡವನ ಆರ್ಕಿಡ್ ಎಂತಲೂ ಕರೆಯುವರು. ಹೂವುಗಳು ಬೆಂಕಿಯ ಕೆಂಡದಂತೆ ಕಡುಕೆಂಪು ಬಣ್ಣದವು, ಮೂರು ಪುಷ್ಪಪಾತ್ರೆಯ ದಳ ಮತ್ತು ಮೂರು ಪುಷ್ಪದಳಗಳು. ಯಾವುದೇ ಆರ್ಕಿಡ್ ನೋಡಿದರೂ ಇಷ್ಟೇ ಸಂಖ್ಯೆಯ ದಳಗಳನ್ನು ಹೊಂದಿರುವುದು ವಿಶೇಷ.

ಸುಮಾರು ಮೂರರಿಂದ ಆರು

